



# ಅಂಡಮಾನಿನ ವಿಷಾದದ ಪುಟ

# ಹೊಮ್‌ಫ್ರೇಗಂಜ್

**ಅಂಡಮಾನಿನ ಇತಿಹಾಸವನ್ನೊಮ್ಮೆ ಕೆದಕಿ ನೋಡಿದರೆ ಹೊಮ್‌ಫ್ರೇಗಂಜ್‌ನಲ್ಲಿನ ದುರಂತ ಕಥನ ತೆರೆದುಕೊಳ್ಳುತ್ತದೆ.**

**ಶ್ರೀನಿವಾಸ ಮೂರ್ತಿ ಎನ್.ಎಸ್.**

ಅಂಡಮಾನ್ ಎನ್ನುತ್ತಿದ್ದಂತೆ ಸುಂದರ ಕಡಲ ತೀರಗಳ ಚಿತ್ರಗಳು ಕಣ್ಣುಕಟ್ಟುತ್ತವೆ. ಇದರೊಂದಿಗೆ ಅಲ್ಲಿನ ಸೆಲ್ಯುಲರ್ ಜೈಲ್, ಹೋರಾಟದ ನೆನಪುಗಳನ್ನು ಮೆಲುಕು ಹಾಕಿಸುತ್ತದೆ. ಆದರೆ ಪ್ರವಾಸಿಗರನ್ನು ಅಷ್ಟಾಗಿ ಸೆಳೆಯದ, ಕರಾಳ ಇತಿಹಾಸಕ್ಕೆ ಸಾಕ್ಷಿಯಾಗಿರುವ ಅಲ್ಲಿನ ಸ್ಥಳವೊಂದು ಅಂಡಮಾನಿನ ವಿಷಾದದ ಪುಟದಂತೆ ಉಳಿದುಕೊಂಡಿದೆ.

ಸ್ವಾತಂತ್ರ್ಯ ಹೋರಾಟದ ಹೊರತಾಗಿ, ಭಾರತದ ಸೇನಾನಿಗಳು ಬಲಿಪಶುಗಳಾದ ಸ್ಥಳವೊಂದು ಅಲ್ಲಿನ ಪೋರ್ಟ್ ಬ್ಲೈರ್ ಸಮೀಪದಲ್ಲಿದೆ.

ಪರಕೀಯರ ದಾಳಿಗೆ ತುತ್ತಾಗಿ, ಬಹುತೇಕ ಎಲ್ಲಾ ರಾಷ್ಟ್ರಗಳಿಂದ ದೂರವಿದ್ದು ಚಿಕ್ಕ ಚಿಕ್ಕ ದ್ವೀಪಗಳಲ್ಲಿ ತನ್ನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಹೆಣಗುತ್ತಿದ್ದ ಪ್ರದೇಶ ಅಂಡಮಾನ್. ಅಂಡಮಾನ್‌ನ ಇತಿಹಾಸವನ್ನೊಮ್ಮೆ ಇಣುಕಿ ನೋಡಿದರೆ, ಮಾನವನ ಆಕ್ರಮಣ ಸಂಸ್ಕೃತಿ ಇಲ್ಲಿನ ಜನರ ಬದುಕನ್ನು ಅದೆಷ್ಟು ದೊಡ್ಡ ಮಟ್ಟದಲ್ಲಿ ನಾಶ ಮಾಡಿದೆ ಎಂಬುದು ಅರಿವಿಗೆ ಬರುತ್ತದೆ.

ಎರಡನೇ ಮಹಾಯುದ್ಧದ ನಂತರ ಜಪಾನ್ ಪಡೆಗಳು ಇಲ್ಲಿನ ದ್ವೀಪಗಳನ್ನು ಆವರಿಸಿಕೊಂಡಾಗ ಬ್ರಿಟಿಷರ ಆಕ್ರಮಣದಿಂದ ನಲುಗಿದ್ದ ಇಲ್ಲಿನ ದ್ವೀಪವಾಸಿಗಳಿಗೆ ಅವರು ವಿಮೋಚಕರಂತೆ ಕಂಡಿದ್ದರು. ಹಾಗಾಗಿಯೇ ಸ್ಥಳೀಯರನ್ನೊಳಗೊಂಡ ಶಾಂತಿ ಸಮಿತಿ ರಚಿಸಲಾಯಿತು. 1942ರಲ್ಲಿ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಎಂಬ ಅಂಡಮಾನ್ ಶಾಖೆ ಸ್ಥಾಪಿಸಲಾಯಿತು. ಆದರೆ ಕಾಲಾನಂತರ ಜಪಾನ್, ಇಲ್ಲಿನ ಬ್ರಿಟಿಷ್ ನಿರ್ಮಾಣದ ಆಸ್ತಿಗಳ ಮೇಲೆ ದಾಳಿ ಮಾಡಿ ನಾಶ ಮಾಡಲು ಆರಂಭಿಸಿತು. ಇಲ್ಲಿನ ಸುಭಾಷ್ ಚಂದ್ರ ಬೋಸ್ ದ್ವೀಪದಲ್ಲಿನ ಅವರ ಬಹುತೇಕ ನಿರ್ಮಾಣದ ಜಾಗಗಳು ಜಪಾನ್ ದಾಳಿಗೆ ಸಿಲುಕಿ ನಾಶವಾದವು. ಇವರಿಬ್ಬರ ನಡುವಿನ ವ್ಯತ್ಯಾಸ ಕಾಣದ ಶಾಂತಿ ಸಮಿತಿ ಮತ್ತು ಸ್ಥಳೀಯರ ಸಂಬಂಧಗಳು ಕ್ಷೀಣಿಸಲು ಆರಂಭವಾದವು.

'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಸದಸ್ಯರನ್ನು ಬ್ರಿಟಿಷರಿಗೆ ಬೇಹುಗಾರಿಕೆ ಮಾಡುತ್ತಿರುವುದಾಗಿ ಜಪಾನ್ ಪಡೆ ಅನುಮಾನಿಸಲು ಆರಂಭಿಸಿತು. ಬಹುತೇಕ ಸದಸ್ಯರನ್ನು ಬಂಧಿಸಲಾಯಿತು. ಮಾರ್ಚ್ 30, 1943ರಲ್ಲಿ ಏಳು ಜನರನ್ನು ಕೊಲ್ಲಲಾಯಿತು. ಅಧ್ಯಕ್ಷರಾಗಿದ್ದ ಡಾ. ದಿವಾನ್ ಸಿಂಗ್ ಸಹ ಕಿರುಕುಳಕ್ಕೆ ಬಲಿಯಾದರು. 1943ರಲ್ಲಿ ಸುಭಾಷ್ ಚಂದ್ರ ಬೋಸ್ ಅವರು ಇಲ್ಲಿಗೆ ಭೇಟಿ ನೀಡಿ ಆಜಾದ್ ಹಿಂದ್ ಫೌಜ್ ಮೂಲಕ ಸ್ವಾತಂತ್ರ್ಯದ ಹೊಸ ಮಜಲಿಗೆ ಪ್ರಯತ್ನ ಮಾಡಿದರು. ಆದರೆ ಜಪಾನ್ ಸೈನ್ಯ ಅಧಿಕಾರ ಹಸ್ತಾಂತರ ಮಾಡದೇ ರಾಜಕೀಯ ದಾಳಿಗಾಗಿ ಬಳಸಲು ಪ್ರಯತ್ನ ಮಾಡಿತು. ತನ್ನ ಆಜಾದ್ ಹಿಂದ್ ಫೌಜ್‌ನ ಸದಸ್ಯರನ್ನೂ ಅನುಮಾನದಿಂದ ಬಂಧಿಸಿತು. 1944ರ ಜನವರಿ 30ರಂದು ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ 44 ಸದಸ್ಯರನ್ನು ಇಲ್ಲಿನ ಹೊಮ್‌ಫ್ರೇಗಂಜ್ ಸ್ಥಳಕ್ಕೆ ತರಲಾಯಿತು. ಇಲ್ಲಿ ಐದು ಹಂತದಲ್ಲಿ ಅವರನ್ನು ಬರ್ಬರವಾಗಿ ಸಾಯಿಸಲಾಯಿತು. ದೇಶಭಕ್ತಿ ಘೋಷಣೆಯೊಂದಿಗೆ ಇವರು ತಮ್ಮ ಅಂತ್ಯ ಕಂಡರು. ಇದೇ ಜಾಗದಲ್ಲಿ ಅವರನ್ನು ಹೂಳಲಾಯಿತು.

1979ರಲ್ಲಿ ಈ ಘೋರ ದುರಂತದ ನೆನಪಲ್ಲಿ ಈ ಸ್ಥಳದಲ್ಲಿ ಸ್ಮಾರಕ ಮತ್ತು ಮ್ಯೂಸಿಯಂ ನಿರ್ಮಾಣ ಮಾಡಲಾಯಿತು. ಈ ದುರಂತದಲ್ಲಿ ಮಡಿದವರ ವಂಶಸ್ಥರನ್ನೊಳಗೊಂಡ ಸಮಿತಿ ಪ್ರತಿ ವರ್ಷ ಇಲ್ಲಿ ಸರ್ವಧರ್ಮೀಯ ಸ್ಮಾರಕ ಸೇವೆ ನಡೆಸುತ್ತದೆ. ದುರಂತದಲ್ಲಿ ಬಲಿಯಾದವರ ಹೆಸರುಗಳನ್ನು ಇಲ್ಲಿ ನಿರ್ಮಿಸಿರುವ ಸ್ಥಂಭದಲ್ಲಿ ಕೆತ್ತಲಾಗಿದೆ. ಪಕ್ಕದಲ್ಲಿರುವ ಮ್ಯೂಸಿಯಂನಲ್ಲಿ ಅವರ ಚಿತ್ರಗಳು, ಘಟನೆಯನ್ನು ಸಾಕ್ಷೀಕರಿಸಿದ ಚಿತ್ರಗಳು, ನೇತಾಜಿಯವರ ಭೇಟಿಯ ಚಿತ್ರಗಳು, ಜಪಾನ್ ನಡೆಸಿದ ಆಕ್ರಮಣದ ದಾಖಲೆಗಳು, ನಾಣ್ಯಗಳು, ನೋಟ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಇತಿಹಾಸದ ವಿಷಾದದ ಛಾಯೆಗಳು ಮತ್ತು ನಗರೀಕರಣದ ನೆಪದಲ್ಲಿ ನಾಶವಾದ ಸಂಸ್ಕೃತಿಯ ಪುಟಗಳು ಅಂಡಮಾನ್‌ನಲ್ಲಿ ಇಂದಿಗೂ ಕಾಣಸಿಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in